



## ಮನುಷ್ಯರ ಸ್ವಭಾವಗಳು

"ಸತ್ತ್ವ, ರಜಸ್ಸು, ತಮಸ್ಸು ಈ ಮೂರೂ ಗುಣಗಳ ಸ್ವಭಾವ ಭಿನ್ನಭಿನ್ನವಾದುದು. ಅಹಂಕಾರ, ನಿದ್ರೆ, ಅತಿಭೋಜನ, ಕಾಮ, ಕ್ರೋಧ ಇವೆಲ್ಲ ತಮೋಗುಣಿಯ ಲಕ್ಷಣಗಳು. ರಜೋಗುಣಿಗಳು ಹೆಚ್ಚು ಹೆಚ್ಚು ಕೆಲಸಕಾರ್ಯಗಳನ್ನು ಗಂಟುಹಾಕಿಕೊಳ್ಳುತ್ತಾರೆ; ಬಟ್ಟೆಬರೆ ಠಾಕು ಠೀಕು. ಮನೆ ಪರಿಷ್ಕಾರ ಶುಭ್ರ, ಬೈಠಕ್‌ಖಾನೆಯಲ್ಲಿ ರಾಜಮಹಾರಾಜರ ಪಟ; ಪೂಜೆ ಪುನಸ್ಕಾರಗಳಲ್ಲಿ ಆಡಂಬರ; ಕೊರಳಿಗೆ ಚಿನ್ನದ ರುದ್ರಾಕ್ಷಿ ಸರ; ಯಾರಾದರೂ ದೇವಾಲಯವನ್ನು ನೋಡಲು ಬಂದರೆ ತಾವೇ ಸ್ವತಃ ಅವರನ್ನು ಜೊತೆಯಲ್ಲಿ ಕರೆದುಕೊಂಡುಹೋಗಿ ತೋರಿಸುತ್ತಾರೆ ಮತ್ತು ಹೇಳುತ್ತಾರೆ, 'ಈ ಕಡೆಗೆ ಬನ್ನಿ, ನೋಡಬೇಕಾದ್ದು ಇನ್ನೂ ಇದೆ ಬಿಳಿಯ ಅಮೃತಶಿಲೆ ಹಾಸಿದ ಅಂಗಳ ಮತ್ತು ಬಹಳ ಚೆಂದದ ಕೆತ್ತನೆ ಕೆಲಸ ಮಾಡಿರುವ ಪ್ರಾರ್ಥನಾಲಯ ಇವೆಲ್ಲ ಇಲ್ಲಿ ಇವೆ." ಅವರು ಎಲ್ಲರಿಗೂ ಗೊತ್ತಾಗುವಂತೆ ದಾನಮಾಡುತ್ತಾರೆ. ಸತ್ತ್ವಗುಣಿ ಜನರು ಬಹಳ ನಿಷ್ಠಾವಂತರು ಮತ್ತು ಶಾಂತಸ್ವಭಾವಿಗಳು; ಅವರಿಗೆ ದೊರೆತುದೇ ಉಡಿಗೆತೊಡಿಗೆ; ಸಂಪಾದನೆ ಹೊಟ್ಟೆ ತುಂಬಿಸಿಕೊಳ್ಳಲು ಮಾತ್ರ; ಹೊಗಳುಭಟರ ಕೆಲಸ ಮಾಡಿ ಎಂದಿಗೂ ದುಡ್ಡು ಸಂಪಾದಿಸರು. ಮನೆಗೆ ಸುಣ್ಣ ಬಣ್ಣ ಮಾಡಿರೋದಿಲ್ಲ; ಮಕ್ಕಳ ಉಡುಗೆ ತೊಡಿಗೆಗಳ ವಿಷಯವಾಗಿ ಅಷ್ಟೊಂದು ತಲೆಗೆ ಹಚ್ಚಿಕೊಳ್ಳುವುದಿಲ್ಲ; ಭಗವಚ್ಚಿಂತನೆ ದಾನ ಧ್ಯಾನ ಇವನ್ನೆಲ್ಲ ಗೋಪ್ಯವಾಗಿ ಯಾರಿಗೂ ಗೊತ್ತೇ ಆಗದ ಹಾಗೆ ಮಾಡುತ್ತಾರೆ. ಸೊಳ್ಳೆಪರದೆಯೊಳಗೆ ಕುಳಿತು ಧ್ಯಾನ ಮಾಡುತ್ತಾರೆ. ಜನ ಭಾವಿಸುತ್ತಾರೆ, 'ಇವರು ರಾತ್ರಿ ನಿದ್ರೆ ಬರಲಿಲ್ಲ ಅಂತ ಕಾಣುತ್ತೆ. ಅದಕ್ಕಾಗಿ ಹೊತ್ತು ಹುಟ್ಟಿದರೂ ನಿದ್ರೆ ಮಾಡುತ್ತಿದ್ದಾರೆ' ಎಂದು. ಮೆಟ್ಟಿಲ ಸಾಲಿನಲ್ಲಿ ಸತ್ತ್ವಗುಣ ಕೊನೆಯ ಹಂತ. ಮುಂದಿನದೇ ಮಹಡಿ. ಸತ್ತ್ವಗುಣ ಉಂಟಾಯಿತು ಎಂದರೆ ಭಗವಂತನ ಸಾಕ್ಷಾತ್ಕಾರಕ್ಕೆ ಇನ್ನು ಹೆಚ್ಚು ಕಾಲ ವಿಳಂಬವಾಗದು. ಒಂದು ಕಿಂಚಿತ್ ಮುಂದುವರಿದರೇ ಆತ ದೊರೆತುಬಿಡುತ್ತಾನೆ. (ಸಬ್ ಜಡ್ಜಿಗೆ) ನೀನು ತಾನೆ ಹೇಳಿದವನು ಜನರೆಲ್ಲ ಒಂದೇ ಸರಿಸಮ ಅಂತ; ಈಗ ನೋಡು ಎಷ್ಟೊಂದು ವಿಧದ ಭಿನ್ನ ಭಿನ್ನ ಪ್ರಕೃತಿಗಳ ಜನರಿದ್ದಾರೆ ಎಂಬುದನ್ನು.

"ಇನ್ನೂ ಎಷ್ಟೋ ಅಂತಸ್ತಿನವರಿದ್ದಾರೆ – ನಿತ್ಯಜೀವ, ಮುಕ್ತಜೀವ, ಮುಮುಕ್ಷುಜೀವ, ಬದ್ಧಜೀವ – ವಿವಿಧ ರೀತಿಯ ಮನುಷ್ಯರು. ನಾರದ ಮತ್ತು ಶುಕದೇವ ನಿತ್ಯಜೀವರು; ಯಾವ ರೀತಿ ಜಹಜು ತಾನು ಸಮುದ್ರದ ಆಚೆದಡವನ್ನು ಸೇರುವುದಲ್ಲದೆ, ದೊಡ್ಡ ದೊಡ್ಡ ಜೀವಜಂತುಗಳನ್ನು, ಕೊನೆಗೆ ಆನೆಯನ್ನೂ ಕೂಡ, ಆಚೆದಡಕ್ಕೆ ಸಾಗಿಸಿಬಿಡುತ್ತದೆಯೋ ಹಾಗೆ ಇವರೂ ಕೂಡ ತಾವು ಮುಕ್ತರಾಗುವುದೇ ಅಲ್ಲದೆ ಪರರೂ ಮುಕ್ತರಾಗಲು ನೆರವಾಗುತ್ತಾರೆ. ಮತ್ತು, ಇವರನ್ನು ಒಂದು ಎಸ್ಟೇಟಿನ ಮ್ಯಾನೇಜರಿಗೆ ಹೋಲಿಸಬಹುದು. ಆತ ಒಂದು ತಾಲ್ಲೂಕಿನಲ್ಲಿ ಸುವ್ಯವಸ್ಥೆ ಮಾಡಿದ ನಂತರ ಮತ್ತೆ ಇನ್ನೊಂದು ತಾಲ್ಲೂಕಿಗೆ ಅದೇ ಕಾರ್ಯಕ್ಕಾಗಿ ಹೋಗುತ್ತಾನೆ. ಬಳಿಕ ಮುಮುಕ್ಷುಜೀವಿಗಳಿದ್ದಾರೆ. ಇವರು ಸಂಸಾರದ ಬಲೆಯಿಂದ ತಪ್ಪಿಸಿಕೊಳ್ಳಲು ಅತ್ಯಂತ ವ್ಯಾಕುಲಹೃದಯದಿಂದ ತೀವ್ರವಾಗಿ ಪ್ರಯತ್ನ ಮಾಡುತ್ತಾರೆ. ಇವರಲ್ಲಿ ಒಬ್ಬಿಬ್ಬರು ಮಾತ್ರ ಬಲೆಯಿಂದ ತಪ್ಪಿಸಿಕೊಂಡುಬಿಡಬಹುದು. ಇವರೇ ಮುಕ್ತಜೀವರು. ನಿತ್ಯಜೀವರನ್ನು ಬಹಳ ಬುದ್ಧಿಯುಳ್ಳ ಮೀನಿಗೆ ಹೋಲಿಸಬಹುದು; ಅವರು ಎಂದಿಗೂ ಬಲೆಗೆ ಬೀಳರು.

"ಆದರೆ ಬದ್ಧಜೀವಿಗಳು —ಸಂಸಾರಜೀವಿಗಳು— ಇವರಿಗೆ ಪ್ರಜ್ಞೆ ಎಂಬುದೇ ಇಲ್ಲ. ಇವರು ಬಲೆಗೆ ಸಿಕ್ಕಿಕೊಂಡುಬಿಟ್ಟಿದ್ದಾರೆ. ತಾವು ಬಲೆಗೆ ಸಿಕ್ಕಿಕೊಂಡುಬಿಟ್ಟಿದ್ದೇವೆ ಎಂಬ ಅರಿವೂ ಇಲ್ಲ ಇವರಿಗೆ. ಇವರ ಎದುರಿಗೇ ಹರಿಕಥಾಶ್ರವಣವಾಗುತ್ತಿದ್ದರೆ, ಇವರು ಆ ಸ್ಥಳವನ್ನು ಬಿಟ್ಟು ಬೇರೆ ಕಡೆ ಹೊರಟುಹೋಗುತ್ತಾರೆ. ಇವರು ಹೇಳುತ್ತಾರೆ, 'ಹರಿನಾಮವನ್ನು ಸಾಯುವಾಗ ಮಾಡಿದರಾಯಿತು, ಈಗಲೇ ಏಕೆ?' ಎಂದು. ಇವರು ಮೃತ್ಯುಶಯ್ಯೆಯಲ್ಲಿ ಮಲಗಿರುವಾಗ ಹೆಂಡತಿಗೂ ಅಥವಾ ಮಕ್ಕಳಿಗೂ ಹೇಳುತ್ತಾರೆ, 'ದೀಪದ ಕಂಬಕ್ಕೆ ಅಷ್ಟೊಂದು ಬತ್ತಿಗಳನ್ನೇಕೆ ಹಾಕಿದ್ದೀರಿ? ಒಂದು ಬತ್ತಿಯೇ ಸಾಕು. ಇಲ್ಲದಿದ್ದರೆ ಎಣ್ಣೆ ಹೆಚ್ಚಾಗಿ ಖರ್ಚಾಗಿ ಬಿಡುತ್ತದೆ ಎಂದು. ಮತ್ತೆ ಅದೇ ಸಮಯದಲ್ಲಿ ಹೆಂಡತಿ–ಮಕ್ಕಳನ್ನು ನೆನೆಸಿಕೊಂಡು ಗೊಳೋ ಅಂತ ಅಳುತ್ತಾರೆ; 'ಅಯ್ಯೋ! ನಾನು ಸತ್ತರೆ ಇವರ ಗತಿ ಏನು?' ಎಂದು ಮತ್ತೆ ಹೇಳುತ್ತಾರೆ.

"ಬದ್ಧಜೀವರು ಯಾವ ಕಾರ್ಯದ ದೆಸೆಯಿಂದ ಅಷ್ಟೊಂದು ದುಃಖಗಳಿಗೆ ಈಡಾಗುವರೋ, ಮತ್ತೆ ಅದೇ ಕಾರ್ಯದಲ್ಲಿ ತೊಡಗುವರು. ಇವರ ವ್ಯವಹಾರ ಒಂಟೆಯ ಹಾಗೆ. ಒಂಟೆ ಮುಳ್ಳುಗಿಡ ತಿನ್ನಲು ಹೋಗಿ ಅದರ ಬಾಯಿಂದ ಪ್ರವಾಹದ ತರಹ ರಕ್ತ ಹರಿಯುತ್ತಿದ್ದರೂ ಅದುಮಾತ್ರ ಆ ಮುಳ್ಳುಗಿಡ ತಿನ್ನುವುದನ್ನು ಬಿಡದು. ಯಾರು ಭಗವಚ್ಚಿಂತನೆ ಮಾಡುತ್ತಾರೋ, ಭಗವಂತನ ಧ್ಯಾನದಲ್ಲಿ ಮಗ್ನರಾಗಿರುತ್ತಾರೋ ಅವರನ್ನು ಈ ಬದ್ಧಜೀವರು, 'ಹುಚ್ಚರು' ಎಂದು ಹೀಯಾಳಿಸುತ್ತಾರೆ.